ಬೆನ್ನುಮೂಳೆ ಹೊಂದಿರುವ ಲಕ್ಷಣಗಳ ಆಧಾರವನ್ನು ಹೊಂದಿಕೊಂಡು ಸ್ಕೋಲಿಯೊಸಿಸ್ ಅನ್ನು ವರ್ಗೀಕರಿಸಬಹುದು.

- ಹುಟ್ಟಿನಿಂದಲೇ ಬಂದ ಸ್ವರೂಪದ್ದು
- ಹುಟ್ಟಿದ ಬಳಿಕ ವಿವಿಧ ಕಾರಣಗಳಿಗೆ ಬಂದಿರುವಂಥದ್ದು
- ಶಾರೀರಿಕ ಆಘಾತ, ಮೆದುಳಿನ ಲಕ್ವ, ನರಸಂಬಂಧಿ ದೋಷ... ಮುಂತಾದ ಕಾರಣಗಳಿಂದಲೂ ಸ್ಕೋಲಿಯೊಸಿಸ್ ಬರಬಹುದು.

## ಕಾರಣ ಅನೇಕ

ಸ್ಕೋಲಿಯೊಸಿಸ್‌ಗೆ ಕಾರಣಗಳು ಅನೇಕ. ಮಕ್ಕಳಲ್ಲಿ ಬರುವ ಬಹುತೇಕ ಸ್ಕೋಲಿಯೊಸಿಸ್ ಪ್ರಕರಣಗಳಿಗೆ ಕಾರಣ ಈಡಿಯೊಪಥಿಕ್ (ಗೊತ್ತಿಲ್ಲದ ಕಾರಣಗಳು) ಎನ್ನುವುದು ಬೆನ್ನುಮೂಳೆ ತಜ್ಞರ ಅಭಿಮತ. ಆದರೂ ಆನುವಂಶಿಕ ಕಾರಣಗಳು, ಮಗು ಹುಟ್ಟಿದ ಮೇಲೆ ಬರುವ ವಿವಿಧ ಕಾಯಿಲೆಗಳು ತೀವ್ರ ಸ್ವರೂಪ ತಾಳಿದಾಗ ಬರಬಹುದಾದ ಬೆನ್ನುಮೂಳೆ ವಿಕೃತಿ, ನರಸಂಬಂಧಿ ಕಾಯಿಲೆ, ಮೆದುಳಿನ ಲಕ್ವ ಆದಾಗ ಬೆನ್ನುಮೂಳೆಗೆ ಏಟು ತಗಲಿ ಬೆನ್ನುಮೂಳೆ ವಕ್ರವಾಗುವ ಸಾಧ್ಯತೆ ಇದೆ.

'ಕೆಲವೊಮ್ಮೆ ಬೆನ್ನುಮೂಳೆಯಲ್ಲಿ ಬೆಳವಣಿಗೆ ಸಮಸ್ಯೆಯೂ ಸ್ಕೋಲಿಯೊಸಿಸ್‌ಗೆ ಕಾರಣವಾಗಬಹುದು. ಇನ್ನೂ ಕೆಲವೊಮ್ಮೆ ಮಗುವಿನ ಬೆಳವಣಿಗೆ ಅತ್ಯಂತ ವೇಗವಾಗಿ ಆಗುವುದರಿಂದ, ಶೀಘ್ರವಾಗಿ ಮಗುವಿನ ಎತ್ತರ ಹೆಚ್ಚಾದರೆ ಬೆನ್ನುಮೂಳೆಯ ಬಲಭಾಗ ಸರಿಯಾಗಿ ಬೆಳವಣಿಗೆ ಆಗಬಹುದಾದರೂ ಎಡಭಾಗ ಆಗಿರುವುದಿಲ್ಲ. ಹೀಗೆ ಆದ ಸಂದರ್ಭದಲ್ಲಿ ಮಗುವಿಗೆ ಸ್ಕೋಲಿಯೊಸಿಸ್ ಉಂಟಾಗುವ ಸಂಭವ ಇದೆ' ಎನ್ನುತ್ತಾರೆ ಬೆಂಗಳೂರಿನ ಜಯನಗರದಲ್ಲಿರುವ ಸ್ಕೋಲಿಯೊಸಿಸ್ ಶಸ್ತ್ರಚಿಕಿತ್ಸಕರಾಗಿರುವ ಡಾ. ಯೋಗೇಶ್ ಕೆ. ಪಿತ್ವಾ.

'ಕೆಲ ಸಂದರ್ಭದಲ್ಲಿ ಆನುವಂಶಿಕತೆಯೂ (ಜೆನೆಟಿಕ್) ಸ್ಕೋಲಿಯೊಸಿಸ್‌ಗೆ ಕಾರಣವಾಗಬಹುದು. ಮಗು ಹುಟ್ಟುವಾಗ ಉಂಟಾಗುವ ಸಮಸ್ಯೆ (ಕಂಜನೈಟಲ್ ಡಿಸಾರ್ಡರ್), ಬೆನ್ನುಮೂಳೆ ಅಸಹಜವಾಗಿಯೇ ಮೂಡಿರುವುದು, ಸೆರೆಬ್ರಲ್ ಪಾಲ್ಸಿ, ಪೋಲಿಯೊದಿಂದ ಉಂಟಾಗುವ ಸಮಸ್ಯೆ, ನ್ಯೂರೊಮಸ್ಕ್ಯುಲರ್ ಸ್ಕೋಲಿಯೊಸಿಸ್ ಎಲ್ಲವೂ ಬೆನ್ನುಮೂಳೆ ವಿಕೃತಿಗೆ ಕಾರಣಗಳಾಗಬಹುದು' ಎಂದು ವಿವರಿಸುತ್ತಾರೆ ಡಾ. ಯೋಗೇಶ್.

## ರೋಗ ಲಕ್ಷಣಗಳು

- ಬೆನ್ನುಮೂಳೆಯ ಒಂದು ಪಾರ್ಶ್ವದಲ್ಲಿ ಅಸಹಜವಾಗಿರುವ ಸ್ನಾಯುವ್ಯೂಹದಿಂದಾಗಿ ಅತಿಯಾದ ನೋವು
- ಪಕ್ಕೆಲುಬಿನ ಒಂದು ಭಾಗ ತಿರುಚಿಕೊಂಡಿರುವುದು, ಇದರಿಂದ ಮಲಗಲು, ಸರಿಯಾಗಿ ನಡೆದಾಡಲು ತೊಂದರೆಯಾಗುವುದು







> ಬೆನ್ನುಮೂಳೆಯ ಅಸಹಜ ಬೆಳವಣಿಗೆಯನ್ನು ಆರಂಭದ ಹಂತದಲ್ಲಿಯೇ ಪತ್ತೆ ಹಚ್ಚಿದರೆ ಸಮಸ್ಯೆಯನ್ನು ಬೇಗನೆ ಪರಿಹರಿಸಬಹುದು.
>
> **-ಡಾ. ಯೋಗೇಶ್ ಕೆ. ಪಿತ್ವಾ,**
> ಸ್ಕೋಲಿಯೊಸಿಸ್ ಶಸ್ತ್ರಚಿಕಿತ್ಸಕ

- ಬೆನ್ನುಮೂಳೆ ತಿರುಚಿಕೊಂಡಿರುವುದರ ಪರಿಣಾಮ ಸೊಂಟ ಹಾಗೂ ಕಾಲುಗಳ ಭಾಗದಲ್ಲಿ ವಕ್ರತೆ ಉಂಟಾಗಿ ನಿತ್ಯದ ಕಾರ್ಯಚಟುವಟಿಕೆಗೆ ತೀವ್ರ ಅಡ್ಡಿಯಾಗುವುದು
- ಸ್ತ್ರೀಯರಲ್ಲಿ ಸ್ತನದ ಗಾತ್ರ ಮತ್ತು ಸ್ಥಾನದಲ್ಲಿ ವ್ಯತ್ಯಯ ಉಂಟಾಗುವುದು
- ನರಗಳ ಕಾರ್ಯಕ್ಷಮತೆಯಲ್ಲಿ ನಿಧಾನಗತಿಯ ಚಲನೆ, ರಕ್ತ ಸಂಚಾರದಲ್ಲಿ ಅಡಚಣೆ... ಇವೇ ಮುಂತಾದ ರೋಗ ಲಕ್ಷಣಗಳನ್ನು ಸ್ಕೋಲಿಯೊಸಿಸ್ ಹೊಂದಿದೆ.

## ಪರೀಕ್ಷೆಗಳೇನು?

- ಸ್ಕೋಲಿಯೊಸಿಸ್‌ನ ಆರಂಭಿಕ ಲಕ್ಷಣಗಳನ್ನು ಶಾರೀರಿಕ ಪರೀಕ್ಷೆಗಳ ಮೂಲಕ ಪತ್ತೆ ಹಚ್ಚಬಹುದು.
- ಸ್ಕ್ಯಾನಿಂಗ್ ಮತ್ತು ಎಕ್ಸ್‌ರೆ ಮೂಲಕ ಪತ್ತೆ ಹಚ್ಚಿ ಚಿಕಿತ್ಸೆ ಪಡೆಯಬಹುದು.
- ಸ್ನಾಯು ದಾರ್ಢ್ಯತೆಯ ಪರೀಕ್ಷೆ

'ಸ್ಕೋಲಿಯೊಸಿಸ್‌ಗೆ ಸರ್ಜರಿ ಇಲ್ಲದೆಯೂ ಚಿಕಿತ್ಸೆಯ ಮೂಲಕ ಗುಣಪಡಿಸಬಹುದು ಎನ್ನುವ ಡಾ. ಯೋಗೇಶ್, ಈ ವಕ್ರತೆಯ ಮೊದಲ ಹಂತ ಆ್ಯಡೆಮ್ಸ್ ಫಾರ್ವರ್ಡ್ ಬೆಂಡಿಂಗ್ ಟೆಸ್ಟ್ ಮೂಲಕ ಸಮಸ್ಯೆಯನ್ನು ಪರಿಹರಿಸಬಹುದು' ಎನ್ನುತ್ತಾರೆ.

'ಫಿಸಿಯೊಥೆರಪಿ, ಸರಳ ವ್ಯಾಯಾಮ ಚಿಕಿತ್ಸೆಯೂ ಪರಿಹಾರ ಒದಗಿಸಬಹುದು. ವಿಟಮಿನ್ ಡಿ ಸಪ್ಲಿಮೆಂಟ್ಸ್ ಕೊಡಬಹುದು. ಮಧ್ಯ ಬೆನ್ನು ಐವತ್ತು ಡಿಗ್ರಿ, ಕೆಳಗಿನ ಬೆನ್ನು 30 ಡಿಗ್ರಿ ಬಾಗಿದ್ದರೆ ಮಾತ್ರ ಸರ್ಜರಿಯೇ ದಾರಿ. ಬೆನ್ನುಮೂಳೆ ಬೆಳವಣಿಗೆಯಲ್ಲಿ ವಿಪರೀತ ಅಸಹಜತೆ ಕಂಡುಬಂದರೆ ಶಸ್ತ್ರಚಿಕಿತ್ಸೆಯನ್ನೇ ಶಿಫಾರಸು ಮಾಡಬೇಕಾಗುತ್ತದೆ. ಮಕ್ಕಳಲ್ಲಿ ಬಾಗಿದ ಬೆನ್ನು ಅಸಹಜ ಬೆಳವಣಿಗೆಯ ಲಕ್ಷಣ. ಇದನ್ನು ಶಸ್ತ್ರಚಿಕಿತ್ಸೆ ಮೂಲಕ ಸರಿಪಡಿಸಬಹುದು' ಎನ್ನುತ್ತಾರೆ ಈ ವೈದ್ಯರು.